<u>ದಿನಾಂಕಃ **01-08-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಪಿ ಟಿ ಡಿ ವಕೀಲರಿಂದಃ</u>

ಮೂಲ ದಾವೆ ಸಂಖೆ 31/2021 ದಿನಾಂಕ 27.04.2024 ರಂದು ತೀರ್ಮಾನ ಆಗಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ನಮ್ಮ ಊರು ಕೊಪ್ಪದಿಂದ 12 ಕಿ.ಮಿ., ದೂರದಲ್ಲಿ ಇರುತ್ತದೆ. ನಾನು ಜಮೀನಿನ ಕೆಲಸ ಕಾರ್ಯಗಳಿಗೆ ಶಿವಮೊಗ್ಗದಿಂದ ಬಂದು ಜಮೀನುಗಳಿಗೆ ಭೇಟಿ ಕೊಡುತ್ತೇನೆ ಎಂದರೆ ಸರಿ. ನಾನು ಮೂಲ ದಾವೆ ಸಂಖ್ಯೆ 31/2021 ಇತ್ಯರ್ಥವಾಗಿ ಸದರಿ ದಾವೆಯ ಮೇಲ್ಮನವಿ ಅವಧಿ ಮುಗಿಯುವ ಅವಧಿಯೊಳಗೆ ನಾನು ಆಸ್ಪತ್ರೆಗೆ ಸೇರಿರುವುದಿಲ್ಲ ಎಂದರೆ ಸರಿ. ನಿಪಿ- 1 ರಿಂದ 7 ದಾಖಲೆಗಳನ್ನು ನಾನು ಈ ಮೇಲ್ಮನವಿ ಕಾಲ ವಿಳಂಬ ಮನ್ನ ಮಾಡುವ ಸಲುವಾಗಿ ಸೃಷ್ಟಿ ಮಾಡಿದ ದಾಖಲೆಗಳು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಜೂನ್ 2024 ರಿಂದ ಮಾರ್ಚ್ 2025 ರವರೆಗೆ ವೈಧ್ಯರು ವಿಶ್ರಾಂತಿ ಪಡೆಯುವಂತೆ ಹೇಳಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಮೇಲ್ಮನವಿಯನ್ನು ದಿನಾಂಕ 20.01.2025 ರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಮೇಲ್ಮನವಿಯನ್ನುಸಲ್ಲಿಸುವ ಕಾಲಕ್ಕೆ ಮಧ್ಯಂತರ ಅರ್ಜಿಯಲ್ಲಿ ಎಷ್ಟು ದಿನಗಳ ಕಾಲ ಮೇಲ್ಮನವಿ ಸಲ್ಲಿಸಲು ವಿಳಂಬ ಆಗಿರುತ್ತದೆ ಎಂದು ಹೇಳಿರುವುದಿಲ್ಲ ಆದರೆ ನನ್ನ ಪ್ರಮಾಣ ಪತ್ರದಲ್ಲಿ 239 ದಿನಗಳ ಕಾಲ ವಿಳಂಬ ಆಗಿರುತ್ತದೆ ಎಂದು ಸುಳ್ಳು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ಮಾಡುವ ಸಲುವಾಗಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಯನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ